ಶ್ರೀ ಕೆ. ವಿ. ಶಂಕರಗೌಡ.—ಆ ವಿಷಯ ನರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ವಿ. ಐತಾಳ.—ಈ ಗಲಭೆ ಬಗ್ಗೆ ಇನ್‌ಪೆಸ್ಟಿಗೇಷನ್ ಮಾಡಲ್ಲವೆಂದು ಅಚ್ಚಾಗಿರುವ ಉತ್ತರದಲ್ಲಿ ತಿಳಿಸಿದ್ದಾರೆ. ಹಾಗಿರುವಾಗ ಮಂತ್ರಿಗಳು ಹೇಗೆ ಉತ್ತರ ಕೊಡುತ್ತಾರೆ ?

Sri K. V. SHANKARA GOWDA.—I have received a confidential report from the Deputy Commissioner and the Principal of the College.

ಶ್ರೀ ಪಿ. ವಿ. ಐತಾಳ.—ಅವರು ಕಾನ್‌ಫಿಡೆನ್ಷಿಯಲ್ ಎಂದು ಹೇಳುವುದೇನೂ ಇಲ್ಲ. ಅದನ್ನು ಜೇಬಲ್ ಮೇಲೆ ಇಡುವರೇ ?

Sri K. V. SHANKARA GOWDA.—It is not necessary.

ಶ್ರೀ ಬಿ. ಭಾನ್ಯರಶೆಟ್ಟಿ.—ಈ ಪ್ರಕರಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಒಬ್ಬ ವಿದ್ಯಾರ್ಥಿಯನ್ನು ಮತ್ತು ಕೊಡಗಿನ ಒಬ್ಬ ವಿದ್ಯಾರ್ಥಿಯನ್ನು ವಜಾಮಾಡಲಾಗಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಇಲ್ಲ, ಅವರು ಬಂದು ಸೇರಿಕೊಂಡಿದ್ದಾರೆ.

Failure in S.S.L.C. Examination

312. Sri N. A. CHANNE GOWDA (Pandavapura).—

Will the Minister for Agriculture and Education be pleased to state :—

(*a*) the number of students who took S. S. L. C. Examination in Mandya District (Talukwise) in March 1967 ;

(*b*) the number of them passed in all the 4 parts ;

(*c*) whether the Government has ascertained the causes for such high failures ;

(*d*) what remedial measures the Government propose to improve the sickening position of secondary education in Mandya District ?

A.—Sri K. V. SHANKARA GOWDA (Minister for Agriculture and Education).—

	Name of Taluk		*No. appeared*	*Number who passed all the 4 parts*
	(*a*) and (*b*)—			
1	Mandya	...	2,167	205
2	Srirangapatna	...	447	28
3	Maddur	...	908	72
4	Krishnarajapet	...	819	29
5	Pandavapura	...	585	25
6	Nagamangala	...	554	22
7	Malavalli	...	676	65
		Total ...	6,156	446

(SRI K. V. SHANKARA GOWDA)

(*c*) Yes. The causes are :—

(1) improper choice of elective subjects

(2) want of proper attention by Teachers

(3) lack of interest in parents

(4) lack of trained teachers

(5) promotion of students in the VIII and IX Standards without proper evaluation of their capacity

(*d*) 1. Circulars have been issued to all the High Schools of Mandya District—

(a) to conduct periodical tests in the respective subjects ;

(b) to explain to the pupil their achievements ;

(c) to conduct remedial teaching classes for about an hour every day after school hours to backward pupils ;

(d) to give home assignments and to correct the same regularly and point out to the pupils their strong and weak points so as to improve next time ;

(e) to inform the parents about the progress of their ward ;

(f) form Parent Teachers Associations.

2. Evaluation workshop had been organised at Madhya for Assistant Teachers of High Schools to discuss the evaluation techniques and the Scientific way of setting question papers.

3. Electives are being abolished from 1969.

4. More teachers are being trained.

5. Action is being taken against School managements with poor results.

ಶ್ರೀ ಎನ್. ಎ. ಚೆನ್ನೇಗೌಡ.—ಉತ್ತರದಲ್ಲಿ 6,156 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರೆ 446 ಜನ ತೇರ್ಗಡೆಯಾಗಿದ್ದಾರೆಂದು ತಿಳಿಸಿದೆ. ಅಲ್ಲಿಗೆ ಸೇಕಡ 7.4 ಜನರು ಪಾಸಾಗಿದ್ದಾರೆ. ಖಾಸಗಿ ಶಾಲೆಗಳಲ್ಲಿ ಮತ್ತು ಸರಕಾರಿ ಶಾಲೆಗಳಲ್ಲಿ ಹಿಂದಿನ ವರ್ಷ ಕೂಡ ಫಲಿತಾಂಶ ಬಹಳ ಕಡಮೆ ಇರುವುದರಿಂದ ಅದನ್ನು ಸರಿಪಡಿಸಲು ಏನು ಮಾರ್ಗದರ್ಶನ ಮಾಡುತ್ತಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಶಾಲೆಗಳಿಗೆ ಭೇಟಿ ಕೊಡುವುದು, ಮಾರ್ಗದರ್ಶನ ಮಾಡುವುದು ಮುಂತಾದ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಖಾಸಗಿ ಶಾಲೆಗಳಲ್ಲಿ ಪಾಸಾಗುವವರ ಸಂಖ್ಯೆ ಕಡಮೆಯಾದರೆ ಗ್ರಾಂಟನ್ನು ಕಡಿಮೆ ಮಾಡುವುದಾಗಿ ಹೇಳಿದ್ದೀರಿ. ಸರಕಾರಿ ಶಾಲೆಗಳಲ್ಲೂ ಹೀಗೆ ಪಾಸಾಗುವವರ ಸಂಖ್ಯೆ ಕಡಮೆಯಾಗಿರುವ ಕಡೆ ಏನು ಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅಲ್ಲಿ ಕೂಡ ಸಂಬಂಧಪಟ್ಟವರ ಮೇರೆ ಡಿಸಿಪ್ಲಿನರಿ ಆಕ್‌ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಎ. ಚೆನ್ನೇಗೌಡ.—ಪಾಸಾಗುವವರ ಸಂಖ್ಯೆ ಕಡಮೆಯಾಗುವುದಕ್ಕೆ 5 ಕಾರಣಗಳಿವೆ. ಪ್ರೈವೇಟ್ ಟ್ಯೂಷನ್‌ಗೆ ಮಹತ್ವ ಬಹಳ ಹೆಚ್ಚಾಗಿದೆ, ಅಲ್ಲದೆ ರಾಜಕೀಯಕ್ಕೆ ಬಹಳ

ಉಪಾಧ್ಯಾಯರು ಇಳಿದಿದ್ದಾರೆ, ಎಂ.ಪಿ.ಸಿ.ಸಿ. ಸದಸ್ಯರೂ ಇದರಲ್ಲಿ ಸೇರಿಕೊಂಡಿದ್ದಾರೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಬಂದಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಸರಿಯಾಗಿ ಗಮನ ಕೊಡದಿರುವ ಎಷ್ಟು ಉಪಾಧ್ಯಾಯರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಯಾರ್ಯಾರು ಸರಿಯಾಗಿ ಗಮನ ಕೊಟ್ಟಿಲ್ಲವೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಪ್ರೈವೇಟ್ ಶಾಲೆಗಳಲ್ಲಿ ಉತ್ತೀರ್ಣರಾಗಿರುವವರ ಸಂಖ್ಯೆ ಹೆಚ್ಚು, ಸರಕಾರಿ ಶಾಲೆಗಳಲ್ಲಿ ಕಡಿಮೆ. ಆದುದರಿಂದ ಸರಕಾರಿ ಶಾಲೆಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಯೋಚನೆ ಮಾಡುವರೇ ?

ಶ್ರೀ ಕೆ. ವಿ. ಶಂಕರಗೌಡ.—ಅದು ನಿಜವಲ್ಲ. ಕೆಲವು ಕಡೆ ಸರಕಾರಿ ಶಾಲೆಗಳಲ್ಲೂ ಒಳ್ಳೆಯ ಫಲಿತಾಂಶವಿದೆ. ಆದುದರಿಂದ ಆ ರೀತಿ generalise ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಸರಕಾರಿ ಶಾಲೆಗಳಲ್ಲಿ ತೇರ್ಗಡೆಯಾಗುವವರ ಸಂಖ್ಯೆ ಕಡಮೆಯಾದರೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದಿರಿ. ಇದುವರೆಗೆ ಯಾವ ಶಾಲೆಗಳ ಮೇಲೆ ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಆ ಪಟ್ಟಿ ದೊಡ್ಡದಿದೆ. ಬೇರೆ ಪ್ರಶ್ನೆ ಹಾಕಿದರೆ ಅದನ್ನು ಒದಗಿಸಬಹುದು.

ಶ್ರೀ ಎನ್. ಎ. ಚೆನ್ನೇಗೌಡ.—ಮೇಲುಕೋಟೆಯ ಯದುಶಾಲೆಯಲ್ಲಿ 50 ಜನಕ್ಕೆ 3 ಜನರು ಮಾತ್ರ ಪಾಸು ಮಾಡಿದ್ದಾರೆ. ಅಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅದು ಪ್ರೈವೇಟ್ ಶಾಲೆ, ಸರಕಾರಿ ಶಾಲೆಯಲ್ಲ.

ಶ್ರೀ ಬಿ. ಭಾನ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಸ್. ಎಸ್. ಎಲ್. ಸಿ. ಫಲಿತಾಂಶ ಚೆನ್ನಾಗಿದೆ. ಇದಕ್ಕೆ ಕಾರಣ ಉಪಾಧ್ಯಾಯರು ಶಾಲೆಗಳಲ್ಲಿ ಪಾಠ ಮಾಡದೆ ಮನೆಗಳಲ್ಲಿ ಟ್ಯೂಷನ್ ಇಟ್ಟುಕೊಂಡು ಹುಡುಗರಿಗೆ ಚೆನ್ನಾಗಿ ಪಾಠ ಹೇಳುವುದು ಮತ್ತು ಏನೋ ಮಾಡಿ ಪಾಸು ಮಾಡಿಸುವುದು. ಇದಕ್ಕೆ ಆ ಉಪಾಧ್ಯಾಯರ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ಬೇರೆ ಕಡೆ ಹೇಳುವ ಹಾಗಿಲ್ಲ. ಏನೇನೋ ಮಾಡಿ ಪಾಸು ಮಾಡಿಸುತ್ತಾರೆಂದು ಆರೋಪ ಮಾಡುವುದು ಸರಿಯಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲ ಹೆಚ್ಚು ಮೀನು ತಿನ್ನುವುದರಿಂದ ಅಲ್ಲಿಯವರು ಬಹಳ ಬುದ್ಧಿವಂತರು.

S. S. L. C. Syllabus

313. Sri DIGAMBARA RAO B. KALMANKAR (Aland).—

Will the Minister for Agriculture and Education be pleased to state :—

(*a*) whether it is a fact that the State Education Advisory Board has accepted the S.S.L.C. Syllabus without electives and whether it will be a current for period of 10 years from academic year 1969 ?

(*b*) if so, for what reasons;

(*c*) whether it is a fact that the State Education Advisory Board has recommended two years P.U.C. Course from 1971, if so, on what grounds the change is made ?